


ಈಶ್ವರ ಬಡಿಗೇರ

# ಶ್ರಾವಣದ ನೆಪದಲ್ಲಿ...

**ದೇವರ** ಗುಂಗಿನಿಂದ ತಪ್ಪಿಸಿಕೊಂಡವರು ಯಾರು? ದೇವರಿಲ್ಲ ಎಂದು ವಾದಿಸುವ ಕಟು ನಾಸ್ತಿಕರೂ ತಮ್ಮ ನಂಬಿಕೆಯನ್ನು ಪೋಷಿಸಿಕೊಳ್ಳಲಿಕ್ಕಾಗಿ ದೇವರೊಂದಿಗೆ ಬಗೆಬಗೆಯಲ್ಲಿ ಗುದ್ದಾಡಿದವರೇ. ನಾಸ್ತಿಕರಿರಲಿ, ಆಸ್ತಿಕರೇ ಇರಲಿ– ಬರಹಗಾರರು ಕೂಡ ದೇವರಿಗೆ ಒಂದಲ್ಲ ಒಂದು ಬಗೆಯಾಗಿ ಮುಖಾಮುಖಿ ಆದವರೇ. ರೂಪಕದ ನೆಪದಲ್ಲೋ, ಜಿಜ್ಞಾಸೆಯ ಕಾರಣದಿಂದಲೋ, ಭಕ್ತಿಯ ತೀವ್ರತೆಯಲ್ಲೋ, ಜೀವನಪ್ರೀತಿ ಅಥವಾ ಸೌಂದರ್ಯದ ಕಾರಣಗಳಿಂದಲೋ ಯಾರಾದರೊಬ್ಬ ದೇವರು ಯಾವುದಾದರೂ ರೀತಿಯಲ್ಲಿ ಬರಹಗಾರನನ್ನು ಕಾಡುತ್ತಾನೆ. ಹೀಗೆ ಕಾಡಿದ, ಬರಹದಲ್ಲಿ ನುಸುಳಿದ, ಚಿಂತನೆಯ ಭಾಗವಾದ ದೇವರ ಸ್ವರೂಪ ಯಾವುದು? ಈ ಜಿಜ್ಞಾಸೆಯೇ ಈ ಸಂಚಿಕೆಯ ವಿಶೇಷ.
ಹಬ್ಬಗಳ ಸಾಲುದೀಪದ ಶ್ರಾವಣಕ್ಕೆ ಮುನ್ನುಡಿಯಂತಿರುವ ಈ ಸಂಚಿಕೆಯಲ್ಲಿ ಐವರು ಹಿರಿಯ ಬರಹಗಾರರು ತಮ್ಮೊಳಗಿನ ದೇವರ ಬೀಜಗಳ ಹುಡುಕಾಟ ನಡೆಸಿದ್ದಾರೆ. ಈ ಹುಡುಕಾಟ ಓದುಗರಿಗೂ ಇಷ್ಟವಾಗುವ ನಂಬಿಕೆ ನಮ್ಮದು. ಈ ಸಂಚಿಕೆಯ ಉಳಿದ ವಿಶೇಷಗಳಲ್ಲಿ ಎದ್ದುಕಾಣುವಂತಿರುವುದು– ಗೋಹರಬಾಯಿ ಕರ್ನಾಟಕಿ ಅವರ ಕುರಿತಾದ ಲೇಖನ ಹಾಗೂ ಹಿರಿಯ ಕವಿ ಎಚ್.ಎಸ್.ಶಿವಪ್ರಕಾಶ್ ಅವರ ಸಂದರ್ಶನ. ನೂರು ತುಂಬಿದ ಈ ಅಪೂರ್ವ ರಂಗನಟಿ–ಗಾಯಕಿ ಗೋಹರಬಾಯಿ ಅವರನ್ನು ರಹಮತ್ ತರೀಕೆರೆ ನೆನಪಿಸಿಕೊಂಡಿರುವ ರೀತಿ ವಿಶಿಷ್ಟವಾಗಿದೆ. ಕವಿ ಶಿವಪ್ರಕಾಶರ ಮಾತುಗಳು ಎಂದಿನಂತೆ ಧ್ಯಾನದ ತುಣುಕುಗಳಂತಿವೆ.
ಆಷಾಢ ಹಿತಕರವಾಗಿರಲಿ; ಶ್ರಾವಣದಲ್ಲಿ ಸಂಭ್ರಮವಿರಲಿ.

–ಸಂಪಾದಕ